ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಯಲಹಂಕ ವಲಯ, ಬೆಂಗಳೂರು–92

ಸಂಖ್ಯೆ: ಸ.ಕಾ.ಅ./ಕೊ.ಉ.ವಿ/ಪಿ.ಆರ್/327/2020–21

ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ,
ಕೊಡಿಗೇಹಳ್ಳಿ ಉಪವಿಭಾಗ,
9ನೇ ಮುಖ್ಯರಸ್ತೆ, ಡಿ ಬ್ಲಾಕ್, ಸಹಕಾರನಗರ
ಬೆಂಗಳೂರು–92, ದಿನಾಂಕ: 15.03.2021

ರವರಿಗೆ,

ಸಹಾಯಕ ಕಾರ್ಯಪಾಲಕ ಅಭಿಯಂತರರು
ದೊಡ್ಡ ಮಳೆನೀರು ಚರಂಡಿ ವಿಭಾಗ,
ಬ್ಯಾಟರಾಯನಪುರ ಕ್ಷೇತ್ರ, ಬೆಂಗಳೂರು.

ಮಾನ್ಯರೇ,

ವಿಷಯ: ಈ ಕಛೇರಿಯ ಉಪವಿಭಾಗದಿಂದ 14ನೇ ಹಣಕಾಸು ಅನುದಾನದಲ್ಲಿ ವಾರ್ಡ್ ಸಂಖ್ಯೆ: 08ರ ಪರಿಕ್ರಮ ಶಾಲೆ ಮುಂಭಾಗದಲ್ಲಿ ದೊಡ್ಡ ಮಳೆನೀರು ಚರಂಡಿಯನ್ನು ದುರಸ್ಥಿಗೊಳಿಸಿ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸಿರುವ ಬಗ್ಗೆ.

ಉಲ್ಲೇಖ: ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ರವರು ನೀಡಿರುವ ಕೆಲಸ ಆದೇಶ ಸಂಖ್ಯೆ: BBMP/EE/BTP/WO/257/2018-19, Date: 08-03-2019

–****–

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018–19ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 14ನೇ ಹಣಕಾಸು ಅನುದಾನದಲ್ಲಿ ರೂ.10.00 ಲಕ್ಷಗಳಿಗೆ ಈ ಕೆಳಕಂಡ ಕಾಮಗಾರಿಗೆ ಜಾಬ್ ಸಂಕೇತವನ್ನು 008–18–000091 ಆಗಿ ದೊರೆತಿರುತ್ತದೆ. "Desilting and repairs to SWD at Kodigehalli in Ward No.08 Kodigehalli". ಸದರಿ ಕಾಮಗಾರಿಯನ್ನು ನಿರ್ವಹಿಸಲು ಟೆಂಡರ್ ಪ್ರಕ್ರಿಯೆ ನಡೆಸಿ ಗುತ್ತಿಗೆದಾರರಾದ ಶ್ರೀ ಬಿ. ಗಿರೀಶ್ ರವರಿಗೆ ಉಲ್ಲೇಖದಂತೆ ಕೆಲಸದ ಆದೇಶವನ್ನು ನೀಡಲಾಗಿರುತ್ತದೆ. ಸದರಿ ಗುತ್ತಿಗೆದಾರರು ಕೆಲಸವನ್ನು ಪೂರ್ಣಗೊಳಿಸಿದ್ದು, ಈ ಕಾಮಗಾರಿಯೂ ವಾರ್ಡ್ ಸಂಖ್ಯೆ 08ರ ವ್ಯಾಪ್ತಿಯಲ್ಲಿನ ಪರಿಕ್ರಮ ಶಾಲೆಯ ಮುಂಭಾಗದಲ್ಲಿರುವ ಬೃಹತ್ ನೀರುಗಾಲುವೆಗೆ 78 ಮೀಟರ್ ಉದ್ದ ಎರಡು ಬದಿ ಗೋಡೆ ದುರಸ್ಥಿ ಹಾಗೂ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸಲಾಗಿರುತ್ತದೆ.

ಸದರಿ ಸ್ಥಳದಲ್ಲಿ ನಿರ್ಮಿಸಲಾಗಿರುವ ಕಾಮಗಾರಿಯನ್ನು ಪರಿಗಣಿಸಿ, ನಿಮ್ಮ ಉಪವಿಭಾಗದ ಕಛೇರಿಯಿಂದ ಈ ನಿರ್ದಿಷ್ಟ ಪ್ರದೇಶದಲ್ಲಿ ಅಭಿವೃದ್ಧಿಯನ್ನು ಕೈಗೊಳ್ಳದಿರಲು ಕೋರಿದೆ.

ತಮ್ಮ ವಿಶ್ವಾಸಿ,

15/3/2021

ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೊಡಿಗೇಹಳ್ಳಿ ಉಪವಿಭಾಗ,
ಬಿಬಿಎಂಪಿ, ಬೆಂಗಳೂರು.